# ಜಿಲ್ಲಾ ಪಂಚಾಯತ ರಾಯಚೂರು.

ಸಂ:ಜಿಪಂರಾ:ಗ್ರಾನೀಸ:ಎಸ್.ಸಿ.ಪಿ./ಟಿ.ಎಸ್.ಪಿ.:ಆಮಂ:2007-08 ದಿನಾಂಕ: 22-01-2008

## ಆದೇಶ.

**ವಿಷಯ** : 2007-08 ನೇ ಸಾಲಿನ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಗಳಡಿ ಗ್ರಾಮೀಣ ಕುಡಿಯುವ ನೀರಿನ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

**ಉಲ್ಲೇಖ**: 1) ಜಿಲ್ಲಾ ಪಂಚಾಯತ ರಾಯಚೂರು ಆದೇಶ ಪತ್ರ ಸಂ: ಜಿಪರಾ/ಯೋಜನೆ/SCP/07-08 ದಿನಾಂಕ:28-12-2007.

2)ಕಾರ್ಯ ಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ಇಂಜಿನೀಯರಿಂಗ ವಿಭಾಗ ರಾಯಚೂರು ಅವರ ಪತ್ರ ಸಂ:ಕಾನಿಅ/ಪಂರಾಇಂ/ರಾವಿ/ಕಿ.ಇಂ.-2/2007-08 ದಿನಾಂಕ:18-1-2008

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ 2007-08 ನೇ ಸಾಲಿಗೆ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಗಳಡಿ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರಿನ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದೆ. ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಉಲ್ಲೇಖ (2) ರ ಪತ್ರದ ಮೂಲಕ ಕೆಳಕಾಣಿಸಿದ ಕುಡಿಯುವ ನೀರಿನ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ಆಡಳಿತಾತ್ಮಕ ಮಂಜೂರಾತಿ ಕೋರಿ ಸಲ್ಲಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಸಲ್ಲಿಸಿದ ಅಂದಾಜು ಪಟ್ಟಿಗಳನ್ನು ಪರಿಶೀಲಿಸಲಾಗಿ, ಎಲ್ಲಾ ಕಾಮಗಾರಿಗಳು 2007-08 ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಸೇರಿರುತ್ತವೆ. ಆದ್ದರಿಂದ ಕೆಳಕಾಣಿಸಿದ ಷರತ್ತಿಗೊಳಪಟ್ಟು ಈ ಕೆಳಕಂಡ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷ ದಲ್ಲಿ) | ಕ್ರಿ.ಯೋ. ಯಲ್ಲಿನ ಪುಟ ಸಂ./ ಕ್ರ.ಸಂ. | ಗ್ರಾಮ ಪಂಚಾಯತ ಹೆಸರು |
|---|---|---|---|---|
| **ತಾಲೂಕ : ಸಿಂಧನೂರು SCP ಯೋಜನೆ** | | | | |
| 1 | ಉಮಲೂಟಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕೋ.ನೀ.ಸ. ಯೋಜನೆ ಅಭಿವೃದ್ದಿ. (1548 ಮೀಟರ ಪೈಪ ಲೈನ, 90 ಸೆಂ.ಮೀ. ಆಳದಲ್ಲಿ, ಪಂಪ ಹೌಸ, ಕೊಳವೆ ಭಾವಿ, KEB ಠೇವಣಿ ಮತ್ತು 2 -ಸಿಸ್ಟರ್ನ ಒದಗಿಸುವುದು.) | 4.00 | 4/1 | ಉಮಲೂಟಿ |
| 2 | ಕೊಣ್ಣೂರು ಗ್ರಾಮದಲ್ಲಿ ಸಿಂಗಲ್ ಫೇಸ ಕಿ.ನೀ.ಸ. ಯೋಜನೆ. (1216 ಮೀಟರ ಪೈಪ ಲೈನ, 105 ಸೆಂ.ಮೀ. ಆಳದಲ್ಲಿ ಅಳವಡಿಸುವುದು.) | 2.00 | 4/2 | ಕೊಳಬಾಳ |
| 3 | ಹಂಚಿನಾಳ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕೋ.ನೀ.ಸ. ಯೋಜನೆ ಅಭಿವೃದ್ದಿ. (1962 ಮೀಟರ ಪೈಪ ಲೈನ ಅಳವಡಿಸುವುದು.) | 3.00 | 4/3 | ಕೊಳಬಾಳ |
| 4 | ದೀನಸಮುದ್ರ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕೋ.ನೀ.ಸ. ಯೋಜನೆ ಅಭಿವೃದ್ದಿ. (ಪೈಪ ಲೈನ, ಪಂಪ ಹೌಸ, ಕೊಳವೆ ಭಾವಿ, KEB ಠೇವಣಿ ಮತ್ತು 2 -ಸಿಸ್ಟರ್ನ ಒದಗಿಸುವುದು.) | 3.00 | 4/4 | ಗುಡದೂರು |
| 5 | ಸಾಗರ ಕ್ಯಾಂಪಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ. (52.50ಮೀ x52.50 ಮೀ x1.50 ಮೀ ಅಳತೆಯ ಪಿಟ್ ವೆಲ್ ನಿರ್ಮಾಣ, 600 ಮೀಟರ ಪೈಪ ಲೈನ ಮತ್ತು 1-ಸಿಸ್ಟರ್ನ ಒದಗಿಸುವುದು.) | 4.00 | 4/5 | ರಾಮತನಾಳ |

| | | | | |
|---|---|---|---|---|
| 6 | ಅಮರಾಪುರಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ. ಹಾಗೂ ಹೊಸ ಕೋ.ನೀ.ಸ. ಯೋಜನೆ. (1260+618 ಮೀಟರ ಪೈಪ ಲೈನ , ಪಂಪ ಹೌಸ, ಪಂಪಿಂಗ ಮಷಿನರಿ, KEB ಠೇವಣಿ ಮತ್ತು 4-ಸ್ಟ್ಯಾಂಡ ಪೊಸ್ಟ ಒದಗಿಸುವುದು.) | 4.10 | 4/6 | ಹೊಸಳ್ಳಿ ಇ.ಜೆ. |
| 7 | ಸಿಂಗಾಪುರ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕೋ.ನೀ.ಸ. ಯೋಜನೆ ಅಭಿವೃದ್ದಿ. (1950 ಮೀಟರ ಪೈಪ ಲೈನ ಮತ್ತು 10 ಸ್ಟ್ಯಾಂಡ ಪೊಸ್ಟಗಳನ್ನು ಒದಗಿಸುವುದು.) | 3.00 | 4/8 | ಮುಕ್ಕುಂದ |
| 8 | ಕುರುಕುಂದ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕೋ.ನೀ.ಸ. ಯೋಜನೆ ಅಭಿವೃದ್ದಿ. (3000 ಮೀಟರ ಪೈಪ ಲೈನ, 90 ಸೆಂ.ಮೀ. ಆಳದಲ್ಲಿ ಅಳವಡಿಸುವುದು ಮತ್ತು 10 ಸ್ಟ್ಯಾಂಡ ಪೊಸ್ಟಗಳನ್ನು ಒದಗಿಸುವುದು.) | 4.50 | 4/10 | ತಿಡಿಗೋಳ |
| 9 | ಹುಲುಗುಂಚಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕೋ.ನೀ.ಸ. ಯೋಜನೆ ಅಭಿವೃದ್ದಿ. (1936 ಮೀಟರ ಪೈಪ ಲೈನ , ಪಂಪ ಹೌಸ, ಪಂಪಿಂಗ ಮಷಿನರಿ, 2-ಕೊಳವೆ ಭಾವಿ, KEB ಠೇವಣಿ ಮತ್ತು 4-ಸಿಸ್ಟರ್ನ ಒದಗಿಸುವುದು.) | 5.00 | 4/11 | ಗೊನ್ವಾರ |
| 10 | ತುರ್ವಿಹಾಳ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ. (1854 ಮೀಟರ ಪೈಪ ಲೈನ, 90 ಸೆಂ.ಮೀ. ಆಳದಲ್ಲಿ ಅಳವಡಿಸುವುದು ಮತ್ತು 4 ಸ್ಟ್ಯಾಂಡ ಪೊಸ್ಟಗಳನ್ನು ಒದಗಿಸುವುದು.) | 2.50 | 4/13 | ತುರ್ವಿಹಾಳ |
| 11 | ರೈತನಗರ ಕ್ಯಾಂಪ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ. (1000 ಮೀಟರ ಪೈಪ ಲೈನ ಮತ್ತು 2-ಸಿಸ್ಟರ್ನ ಒದಗಿಸುವುದು.) | 1.75 | 4/14 | ಬೂತಲದಿನ್ನ |
| 12 | ಸೂರ್ಯರೆಡ್ಡಿ ಕ್ಯಾಂಪ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ. (ನೀರು ಶೇಕರಣಾ ತೊಟ್ಟಿ ಆಳ ಹೆಚ್ಚಿಸುವುದು.) | 2.45 | 4/15 | ಗೌಡನಭಾವಿ |
| 13 | ಅರಳಿಹಳ್ಳಿ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ. (150+1300 ಮೀಟರ ಪೈಪ ಲೈನ , ಪಂಪ ಹೌಸ, ಪಂಪಿಂಗ ಮಷಿನರಿ, KEB ಠೇವಣಿ ಮತ್ತು 4-ಸ್ಟ್ಯಾಂಡ ಪೊಸ್ಟ ಒದಗಿಸುವುದು.) | 3.50 | 4/16 | ವಿರುಪಾಪುರ |
| 14 | ಧಡೇಸೂಗುರು ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಕೋ.ನೀ.ಸ. ಯೋಜನೆ ಅಭಿವೃದ್ದಿ.(1624 ಮೀಟರ ಪೈಪ ಲೈನ ಅಳವಡಿಸುವುದು.) | 2.00 | 4/17 | ಧಡೇಸೂಗುರು |
| **ತಾಲೂಕ : ಸಿಂಧನೂರು TSP ಯೋಜನೆ** | | | | |
| 1 | ಬೊಮ್ಮನಾಳ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ (1160 ಮೀಟರ ಪೈಪ ಲೈನ, ಪಂಪ ಹೌಸ, ಕೊಳವೆ ಭಾವಿ, KEB ಠೇವಣಿ ಮತ್ತು ಸಿಸ್ಟರ್ನ ಒದಗಿಸುವುದು.) | 3.00 | 4/1 | ಗುಂಡಾ |
| 2 | ರಂಗಾಪುರ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ. (1338 ಮೀಟರ ಪೈಪ ಲೈನ, 90 ಸೆಂ.ಮೀ. ಆಳದಲ್ಲಿ ಅಳವಡಿಸುವುದು.) | 2.00 | 4/2 | ಗುಡದೂರು |
| 3 | ಕಲ್ಮಂಗಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ (1246 ಮೀಟರ ಪೈಪ ಲೈನ, ಪಂಪ ಹೌಸ, ಕೊಳವೆ ಭಾವಿ, KEB ಠೇವಣಿ ಮತ್ತು 2-ಸಿಸ್ಟರ್ನ ಒದಗಿಸುವುದು.) | 3.50 | 4/3 | ಕಲ್ಮಂಗಿ |
| 4 | ಸುಲ್ತಾನಪುರ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದಿ.(ನೀರು ಶೇಕರಣಾ ತೊಟ್ಟಿ ನಿರ್ಮಾಣ). | 4.00 | 4/4 | ಗೌಡನಭಾವಿ |
| 5 | ದಿದ್ದಗಿ ಗ್ರಾಮದ ಎಸ್. ಟಿ. ಕಾಲೋನಿಯಲ್ಲಿ ಕೋ.ನೀ.ಸ. ಯೋಜನೆ ಅಭಿವೃದ್ದಿ. (1600 ಮೀಟರ ಪೈಪ ಲೈನ ಒದಗಿಸುವುದು.) | 2.00 | 4/5 | ರಾಮತ್ನಾಳ |
| 6 | ಹನುಮಾನನಗರ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ | 4.40 | 4/6 | ಹೊಸಳ್ಳಿ ಇ.ಜೆ |
| 7 | ಹೆಡಗಿನಾಳ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ. ( 90.11ಮೀ x50.11 ಮೀ x1.56 ಮೀ ಅಳತೆಯ ಪಿಟ್ ವೆಲ್ ನಿರ್ಮಾಣ) | 5.00 | 4/7 | ಬಾದರ್ಲಿ |

| | | | | |
|---|---|---|---|---|
| 8 | ಕನ್ನಾರಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ (73.58 ಮೀ x35.58 ಮೀ x1.86 ಮೀ ಆಳತೆಯ ಪಿಟ್ ವೆಲ್ ನಿರ್ಮಾಣ) | 3.50 | 4/8 | ಅಲಬನೂರು |
| 9 | ಹೊಸಳ್ಳಿ(ಕೆ) ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ.(2250 ಮೀಟರ ಪೈಪ ಲೈನ, ಪಂಪ ಹೌಸ, ಮತ್ತು ಸ್ಟ್ಯಾಂಡ ಪೋಸ್ಟಗಳನ್ನು ಒದಗಿಸುವುದು.) | 3.50 | 4/9 | ಗುಂಜಳ್ಳಿ |
| 10 | ಮಾವಿನಮಡು ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ (1085 ಮೀಟರ ಪೈಪ ಲೈನ ಮತ್ತು 3 ಸಿಸ್ಟರ್ನ ಒದಗಿಸುವುದು.) | 2.50 | 4/10 | ಚೆನ್ನಳ್ಳಿ |
| 11 | ಗೋನ್ವಾರ (ವಿರುಪಾಕ್ಷನಗರ) ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ಕಿ.ನೀ.ಸ. ಯೋಜನೆ ಅಭಿವೃದ್ದಿ. (1600 ಮೀಟರ ಪೈಪ ಲೈನ 105 ಸೆಂ.ಮೀ. ಆಳದಲ್ಲಿ, ಪಂಪ ಹೌಸ, ಪಂಪಿಂಗ ಮಷಿನರಿ,ಕೊಳವೆ ಭಾವಿ, KEB ಠೇವಣಿ ಮತ್ತು 2-ಸಿಸ್ಟರ್ನ ಒದಗಿಸುವುದು.) | 4.00 | 4/11 | ಗೊನ್ವಾರ |
| 12 | ರಾಜೀವನಗರ ಕ್ಯಾಂಪ ಎಸ್.ಟಿ. ಕಾಲೋನಿಯಲ್ಲಿ ಕೋ.ನೀ.ಸ. ಯೋಜನೆ. ( 67ಮೀ x67 ಮೀ x1.26 ಮೀ ಆಳತೆಯ ಪಿಟ್ ವೆಲ್ ನಿರ್ಮಾಣ) | 4.00 | 4/12 | ಜಾಲಿಹಾಳ |

**ಷರತ್ತುಗಳು:**

1. ಈ ಯೋಜನೆಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಬೇರೆ ಯಾವುದೇ ಯೋಜನೆಯಲ್ಲಿ ತೆಗೆದುಕೊಂಡಿಲ್ಲವೆಂದು ದೃಢೀಕರಿಸುವುದು.
2. ಈ ಎಲ್ಲಾ ಕಾಮಗಾರಿಗಳನ್ನು 2007-08 ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಬೇಕು.
3. ಜಿಲ್ಲಾ ಪಂಚಾಯತ ಕಛೇರಿಯಲ್ಲಿ ಕಾಮಗಾರಿಗಳ ಗಣಕೀಕೃತ ಮಾಹಿತಿಯನ್ನು update ಮಾಡಲು ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ ಹಾಗೂ ಪೂರ್ಣಗೊಳಿಸಿದ ದಿನಾಂಕ ಅಥವಾ ಪೂರ್ಣಗೊಳಿಸಬಹುದಾದ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಈ ಕಾರ್ಯಾಲಯದಿಂದ ನೀಡಿದ ನಮೂನೆಯಲ್ಲಿ ಒದಗಿಸಲು ಸೂಚಿಸಿದೆ. ಹಾಗೂ ಹಿಂದಿನ ಮಾಹೆಯಲ್ಲಿನ ವೆಚ್ಚದ ವಿವಿರಗಳನ್ನು ಪ್ರತಿ ತಿಂಗಳು 5 ನೇ ದಿನಾಂಕದೊಳಗೆ ಈ ಕಛೇರಿಗೆ ಸಲ್ಲಿಸುವುದು.
4. ಕಾಮಗಾರಿಯ ಅನುಷ್ಠಾನ ಮತ್ತು ಆರ್ಥಿಕ ಮತ್ತು ಭೌತಿಕ ಪ್ರಗತಿಯ ಮಾಹಿತಿಯನ್ನು ಸಂಬಂದಿಸಿದ ಗ್ರಾಮ ಪಂಚಾಯಿತಿಗೆ ಒದಗಿಸುವುದು.
5. ಕಾಮಗಾರಿಗಳನ್ನು ಲಬ್ಯ ಅನುದಾನಕ್ಕೆ ತಕ್ಕಂತೆ ಅನುಷ್ಠಾನಗೊಳಿಸುವುದು ಹಾಗೂ ವೆಚ್ಚವನ್ನು ಸಂಬಂದಿಸಿದ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸುವುದು.
6. ಅಂದಾಜು ಮೊತ್ತ ರೂ 5.00 ಲಕ್ಷ ಒಳಗಿನ ಕಾಮಗಾರಿಗಳಿಗೆ ಇದೇ ಆರ್ಥಿಕ ವರ್ಷದಲ್ಲಿ ಪೂರ್ಣ ಅನುದಾನ ಉಪಯೋಗಿಸಿಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲು ಅನುಮತಿ ನೀಡಲಾಗಿದೆ.ಯಾವುದೇ ಕಾರಣಕ್ಕೂ ಈ ಕಾಮಗಾರಿಗಳು ಮುಂದಿನ ವರ್ಷಕ್ಕೆ ಮುಂದುವರೆದ ಕಾಮಗಾರಿಗಳಾಗದಂತೆ ನೋಡಿಕೊಳ್ಳತಕ್ಕದ್ದು.

(ಎಸ್.ಅನೀಸ್ ಸಿರಾಜ್)
ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ರಾಯಚೂರು.

**ಪ್ರತಿಯನ್ನು ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಇವರಿಗೆ ಕಳುಹಿಸಿದೆ.**

1. ಮಾನ್ಯ ಅದ್ಯಕ್ಷರು/ಉಪಾದ್ಯಕ್ಷರು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
2. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
3. ಕಾರ್ಯ ಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಇವರಿಗೆ ಆಡಳಿತ ಮಂಜೂರಾತಿ ನೀಡಿದ ಅಂದಾಜು ಪಟ್ಟಿಗಳನ್ನು ಲಗತ್ತಿಸಿ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರು ಪಂಚಾಯತ ರಾಜ್ ಇಂಜಿನೀಯರಿಂಗ ಉಪವಿಭಾಗ ಸಿಂಧನೂರು
5. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ ಸಿಂಧನೂರು.
6. **ಅದ್ಯಕ್ಷರು / ಕಾರ್ಯದರ್ಶಿಗಳು**________________ಗ್ರಾಮ ಪಂಚಾಯತ ____________ ತಾಲ್ಲೂಕು ಇವರಿಗೆ ರವಾನಿಸುತ್ತಾ ಕಾಮಗಾರಿಯ ಆಡಳಿತಾತ್ಮಕ ಮಂಜೂರಾತಿಯ ಬಗ್ಗೆ ಗ್ರಾಮ ಪಂಚಾಯತ ಮಾಸಿಕ ಸಭೆಯಲ್ಲಿ ಓದಿ ದೃಢೀಕರಿಸಲು ಸೂಚಿಸಿದೆ.
7. ಜಿಲ್ಲಾ ಪಂಚಾಯತ ರಾಯಚೂರು ಸೂಚನಾ ಫಲಕಕ್ಕೆ.
8. ಕಛೇರಿ ಪ್ರತಿ.